**2014–15 ನೇ ಸಾಲಿನ ಜಿಲ್ಲಾ ವಲಯ "ರೈತರಿಗೆ ತರಬೇತಿ" ಅನುಷ್ಠಾನ ಮಾರ್ಗಸೂಚಿ.**

## I. ರೈತರಿಗೆ ತರಬೇತಿ (D–09)

**ಪೀಠಿಕೆ :–**

ಕರ್ನಾಟಕ ರಾಜ್ಯವು ತೋಟಗಾರಿಕೆಯಲ್ಲಿ ದೇಶದಲ್ಲೇ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆ ಬೆಳೆಗಳಲ್ಲಿ ಅಧಿಕ ಇಳುವರಿ ನೀಡುವ ಸುಧಾರಿತ / ಹೈಬ್ರಿಡ್ ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ತೋಟಗಾರಿಕೆ ಅಭಿವೃದ್ಧಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ವಿವಿಧ ಪ್ರಕಾರಗಳಲ್ಲಿ ರೈತರಿಗೆ ತಲುಪಿಸುವುದು ಅವಶ್ಯಕವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಉತ್ತಮ ಗುಣಮಟ್ಟದ ಉತ್ಪನ್ನಗಳಿಗೆ ಬೇಡಿಕೆ ಅಧಿಕವಾಗಿದ್ದು ನಮ್ಮ ರೈತರು ಉನ್ನತ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳುವ ಸಲುವಾಗಿ ಇಲಾಖೆಯು ಅನೇಕ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುತ್ತದೆ. ಇಂತಹ ತರಬೇತಿ ಕಾರ್ಯಕಮಗಳನ್ನು ಏರ್ಪಡಿಸುವುದರ ಮೂಲಕ ರೈತರಲ್ಲಿ ಆಸಕ್ತಿ ಮೂಡಿಸಿ ಅವರ ಜೀವನ ಮಟ್ಟವನ್ನು ಸುಧಾರಿಸಲು ಪಗತಿಪರ ರೈತರನ್ನಾಗಿಸಲು ಇಂತಹ ತರಬೇತಿ ಕಾರ್ಯಕಮಗಳು ಬಹಳ ಸಹಕಾರಿಯಾಗುತ್ತವೆ. ಈ ದಿಸೆಯಲ್ಲಿ ಇಲಾಖೆಯು 2005–06 ನೇ ಸಾಲಿನಿಂದ "**ರೈತರಿಗೆ ತರಬೇತಿ**" ಎಂಬ ಯೋಜನೆಯನ್ನು ಹಮ್ಮಿಕೊಂಡಿದ್ದು, ಈ ಯೋಜನೆಯಡಿಯಲ್ಲಿ ತರಬೇತಿ ಕಾರ್ಯಕಮ ರೂಪಿಸುವ ಪೂರ್ವದಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯಕ್ರಮ ರೂಪಿಸಬೇಕು.

**ಮಾರ್ಗಸೂಚಿ:–**

### 1) ರೈತರಿಗೆ ತರಬೇತಿ :

1. ಗ್ರಾಮೀಣ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರುವ ರೈತರು ತಮ್ಮ ಜಮೀನಿನಲ್ಲಿ ಉತ್ಪಾದನೆ / ಉತ್ಪಾದಕತೆ ಹೆಚ್ಚಿಸಲು ನೂತನ ತಾಂತ್ರಿಕತೆ ಬಗ್ಗೆ ಅರಿವು ಮೂಡಿಸಲು ಕನಿಷ್ಟ ಒಂದು ಅಥವಾ ಎರಡು ದಿನಗಳ ತರಬೇತಿ ಕಾರ್ಯಕಮವನ್ನು ರೂಪಿಸುವುದು.
2. ತರಬೇತಿ ಕಾರ್ಯಕ್ರಮಕ್ಕೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆಧ್ಯತೆ ನೀಡಬೇಕು. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ನಿಯಮಾನುಸಾರ ಆಯ್ಕೆ ಕಡ್ಡಾಯ.
3. ತರಬೇತಿ ಕಾರ್ಯಕಮಕ್ಕೆ ಕೃಷಿ ವಿಶ್ವ ವಿದ್ಯಾಲಯ / ಕೃಷಿ ಸಂಶೋಧನಾ ಕೇಂದ್ರ / ಐ.ಐ.ಹೆಚ್.ಆರ್. / ಸಿ.ಪಿ.ಸಿ.ಆರ್.ಐ / ಹಾಗೂ ಇತರೆ ಸಂಸ್ಥೆಗಳಿಂದ ವಿಷಯ ತಜ್ಞರನ್ನು ಆಹ್ವಾನಿಸಿ ತರಬೇತಿ ನೀಡುವುದು ಕಡ್ಡಾಯವಾಗಿರುತ್ತದೆ.
4. ಜಿಲ್ಲಾ ಪಂಚಾಯತ್ ಸದಸ್ಯರು / ತಾಲ್ಲೂಕು ಪಂಚಾಯತ್ ಸದಸ್ಯರು / ಗ್ರಾಮ ಪಂಚಾಯಿತಿ ಸದಸ್ಯರು ಸ್ವತ: ರೈತರಾಗಿರುವುದರಿಂದ ಈ ತರಬೇತಿ ಕಾರ್ಯಕ್ರಮಕ್ಕೆ ಸದರಿಯವರನ್ನು ಕೂಡ ಆಹ್ವಾನಿಸುವುದು ಕಡ್ಡಾಯವಾಗಿರುತ್ತದೆ.

**ತರಬೇತಿ ಕಾರ್ಯಕ್ರಮದಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ತರಬೇತಿ ನೀಡತಕ್ಕದ್ದು.**

1. ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ / ಕೀಟಗಳು ಮತ್ತು ಅವುಗಳ ಹತೋಟಿ, ಸಮಗ್ರ ಕೀಟ / ರೋಗಗಳ ನಿರ್ವಹಣೆ ಬಗ್ಗೆ.
2. ಸಾವಯವ ಗೊಬ್ಬರ ಮತ್ತು ಜೈವಿಕ ಗೊಬ್ಬರಗಳ ಮಹತ್ವ ಮತ್ತು ಉಪಯೋಗ ಮತ್ತು ತಯಾರಿಸುವ ವಿಧಾನ ಹಾಗೂ ಜೈವಿಕ ನಿಯಂತ್ರಣದ ಬಗ್ಗೆ ತರಬೇತಿ ನೀಡುವುದು.
3. ಹನಿ ನೀರಾವರಿ ಪದ್ಧತಿಯ ಉಪಯೋಗ ಮತ್ತು ಪ್ರಾಮುಖ್ಯತೆ.
4. ಮಳೆ ನೀರು ಶೇಖರಣೆ ಮತ್ತು ಇದರ ಉಪಯೋಗ.
5. ಪರ್ಯಾಯ ಬೆಳೆಯ ಬಗ್ಗೆ.
6. ಪಮುಖ ತೋಟಗಾರಿಕೆ ಬೆಳೆಗಳ ಮಾರುಕಟ್ಟೆ ದರಗಳ ಬಗ್ಗೆ ವಿಶ್ಲೇಷಣೆ.
7. ಔಷಧಿ ಮತ್ತು ಸುಗಂಧ ದ್ರವ್ಯ ಬೆಳೆಗಳ ಬೇಸಾಯ ಕ್ರಮಗಳು.
8. ಇತರೆ ವಿಷಯಗಳು.

.....2

**ಕಾರ್ಯನಿರ್ವಹಣಾ ಜವಾಬ್ದಾರಿ.**

1. ಮೊದಲನೆಯ ದಿನದ ತರಬೇತಿ ಕಾರ್ಯಕ್ರಮವನ್ನು ಆಯಾ ತಾಲ್ಲೂಕಿನ ತಾಲ್ಲೂಕು ಪಂಚಾಯತ್ / ಗ್ರಾಮ ಪಂಚಾಯತ್‌ನ ಚುನಾಯಿತ ಜನಪ್ರತಿನಿಧಿಗಳು ಅಥವಾ ಶಾಸಕರನ್ನು ಆಹ್ವಾನಿಸಿ ಉದ್ಘಾಟನೆ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಏರ್ಪಡಿಸತಕ್ಕದ್ದು.
2. ಕಾರ್ಯಕಮ ಪ್ರಾರಂಭಿಸುವ ಪೂರ್ವದಲ್ಲಿ ತರಬೇತಿ ಕಾರ್ಯಕಮದ ಪಟ್ಟಿಯನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ತಾಲ್ಲೂಕು) ರವರು ಸಿದ್ದಪಡಿಸಿ ಸಂಬಂಧಿಸಿದ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.
3. ಫಲಾನುಭವಿಗಳ ಆಯ್ಕೆ ಹಾಗೂ ಅನುಮತಿ ಮಂಜೂರಾತಿಯನ್ನು ನಿಯಮಾನುಸಾರ ತಾಲ್ಲೂಕು ಪಂಚಾಯತ್ / ಜಿಲ್ಲಾ ಪಂಚಾಯತ್ ವತಿಯಿಂದ ಪಡೆದುಕೊಳ್ಳಬೇಕು.
4. ಕಾರ್ಯಕಮದ ಮುಕ್ತಾಯದ ಸಮಾರಂಭ ಹಾಗೂ ರೈತ ಫಲಾನುಭವಿಗಳಿಗೆ ಮಿನಿಕಿಟ್ ವಿತರಣೆಯನ್ನು ಸಂಬಂಧಿಸಿದ ಗ್ರಾಮ ಪಂಚಾಯತ್ / ತಾಲ್ಲೂಕು ಪಂಚಾಯತ್ / ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಚುನಾಯಿತ ಜನಪ್ರತಿ ನಿಧಿಗಳನ್ನೊಳಗೊಂಡಂತೆ ಕಾರ್ಯಕ್ರಮ ಏರ್ಪಡಿಸತಕ್ಕದ್ದು.
5. ತರಬೇತಿ ಸಮಯದಲ್ಲಿ ಪ್ರತಿ ರೈತರಿಗೆ **ಒಂದು ದಿನದ ಅವಧಿಗೆ** ಈ ಕೆಳಕಂಡಂತೆ ಖರ್ಚು ಭರಿಸುವುದು.

| **ಕಾರ್ಯಕ್ರಮ** | **ಅನುದಾನ (ರೂ ಗಳಲ್ಲಿ)** |
|---|---|
| ದಿನಭತ್ಯೆ | 125–00 |
| ಪ್ರವಾಸ ಭತ್ಯೆ | 15–00 |
| ಹಣ್ಣಿನ ಗಿಡಗಳ ಹಂಚಿಕೆ | 30–00 |
| ತರಬೇತಿ ವೆಚ್ಚ (ಲಘು ಉಪಹಾರ ಸೇರಿ) | 30–00 |
| **ಒಟ್ಟು** | **ರೂ. 200–00** |

## II. ರೈತ ಮಹಿಳೆಯರಿಗೆ ತರಬೇತಿ.

ತೋಟಗಾರಿಕೆ ಉತ್ಪನ್ನಗಳು ಅತೀ ಶೀಘ್ರವಾಗಿ ಹಾಳಾಗುವ ಗುಣ ಹೊಂದಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಋತುವಾರು ದೊರೆಯುವ ಹಣ್ಣು / ತರಕಾರಿ ಇತ್ಯಾದಿಗಳನ್ನು ಕಡಿಮೆ ಬೆಲೆಯಲ್ಲಿ ದೊರೆಯುವ ಸಮಯದಲ್ಲಿ ಗೃಹ ಬಳಕೆಗೆ ಬಳಸಿಕೊಳ್ಳಲು ಕಡಿಮೆ ವೆಚ್ಚದ ಶೇಖರಣೆ ಮತ್ತು ಸಂಸ್ಕರಣೆ ತಂತ್ರಜ್ಞಾನವನ್ನು ಬಳಸಿ ಸಂಸ್ಕರಿಸಿದ ಉತ್ಪನ್ನಗಳನ್ನು ತಯಾರಿಸುವ ಸಲುವಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

**ಅನುಷ್ಠಾನ ಕ್ರಮಗಳು :–**

1. ತರಬೇತಿ ಕಾರ್ಯಕ್ರಮಕ್ಕೆ ಎಲ್ಲಾ ವರ್ಗಗಳ ಅರ್ಹ ಅಭ್ಯರ್ಥಿಗಳನ್ನು ನಿಯಮಾನುಸಾರ ಆಯ್ಕೆ ಮಾಡಿಕೊಳ್ಳತಕ್ಕದ್ದು.
2. ಆಯಾಯ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳ ಸಂಸ್ಕರಣೆ ಬಗ್ಗೆ ಸಂಶೋಧನೆ ಕೈಗೊಂಡಿರುವ ವಿಜ್ಞಾನಿಗಳನ್ನು / ಕೃಷಿ ಇಲಾಖೆಯ ಮಹಿಳಾ ವಿಸ್ತರಣಾಧಿಕಾರಿಗಳು ಅಥವಾ ಸಂಸ್ಕರಣೆ ವಿಷಯದಲ್ಲಿ ಪರಿಣಿತರಾಗಿರುವಂತಹವರ ಸೇವೆಯನ್ನು ಪಡೆದುಕೊಳ್ಳತಕ್ಕದ್ದು. ಅವಶ್ಯಬಿದ್ದಲ್ಲಿ ಖಾಸಗಿ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳಬಹುದು.
3. ತರಬೇತಿ ಕಾರ್ಯಕ್ರಮದ ಅವಧಿ ಎರಡು ದಿವಸಗಳು.

.....3

**ಕಾರ್ಯನಿರ್ವಹಣಾ ಜವಾಬ್ದಾರಿ :**

1. ತೋಟಗಾರಿಕೆ ಉತ್ಪನ್ನಗಳು ಹಾಳಾಗದಂತೆ ಸ್ಥಳೀಯವಾಗಿ, ಸುಲಭ ರೀತಿಯಲ್ಲಿ ಸಂರಕ್ಷಣೆ ಮಾಡುವ ಬಗ್ಗೆ ತಿಳಿಸಿಕೊಡುವುದು.
2. ವಿವಿಧ ಹಣ್ಣುಗಳಿಂದ ಜಾಮ್, ಜೆಲ್ಲಿ ಮತ್ತು ಸಮ್ಮಿಶ್ರಿತ ಜಾಮ್ ತಯಾರಿಸುವಿಕೆ ಬಗ್ಗೆ ಪ್ರಾಯೋಗಿಕ ತರಬೇತಿ.
3. ವಿವಿಧ ಹಣ್ಣುಗಳಿಂದ ಜ್ಯೂಸ್ ತಯಾರಿಸುವಿಕೆ ಬಗ್ಗೆ ಪ್ರಾಯೋಗಿಕ ತರಬೇತಿ.
4. ಉಪ್ಪಿನಕಾಯಿ ತಯಾರಿಸುವಿಕೆ (ಪ್ರಾಯೋಗಿಕ).
5. ಅಣಬೆ ಬೇಸಾಯ.
6. ಕಾರ್ಯಕ್ರಮದ ಉದ್ಘಾಟನೆ ಮತ್ತು ಮುಕ್ತಾಯದ ಸಮಾರಂಭಕ್ಕೆ ಚುನಾಯಿತ ಗ್ರಾಮ ಪಂಚಾಯಿತಿ / ತಾಲ್ಲೂಕು ಪಂಚಾಯಿತಿ ಮಹಿಳಾ ಪ್ರತಿನಿಧಿಗಳನ್ನು ಆಹ್ವಾನಿಸಿ ಕಾರ್ಯಕ್ರಮ ಏರ್ಪಡಿಸತಕ್ಕದ್ದು.
7. ತರಬೇತಿ ಸಮಯದಲ್ಲಿ ಪ್ರತಿ ಅಭ್ಯರ್ಥಿಗೆ **ಒಂದು ದಿನದ ಅವಧಿಗೆ** ಈ ಕೆಳಕಂಡಂತೆ ಖರ್ಚು ಭರಿಸುವುದು.

| **ಕಾರ್ಯಕ್ರಮ** | **ಅನುದಾನ (ರೂ.ಗಳಲ್ಲಿ)** |
|---|---|
| ದಿನಭತ್ಯೆ | 125–00 |
| ಪ್ರವಾಸ ಭತ್ಯೆ | 15–00 |
| ಸಂಸ್ಕರಣೆಗೆ ಬೇಕಾದ ಹಣ್ಣು / ತರಕಾರಿ Preservatives / ಅಣಬೆ ಇತ್ಯಾದಿ ಖರೀದಿ | 40–00 |
| ತರಬೇತಿ ವೆಚ್ಚ (ಲಘು ಉಪಹಾರ ಸೇರಿ) | 20–00 |
| **ಒಟ್ಟು** | **ರೂ. 200–00** |